<u>ದಿನಾಂಕಃ 22.06.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>

<u>ಪಾಟೀ ಸವಾಲುಃ 29 ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಪಿ ಆರ್ ಹೆಚ್ ವಕೀಲರಿಂದಃ</u>

1.ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನಾನು 10 ನೇ ತರಗತಿಯವರೆಗೆ ಶಿರಗಂಬಿ ಗ್ರಾಮದಲ್ಲಿ ಹಾಗೂ ಪಿ ಯುಸಿಯನ್ನು ಹಿರೇಕೆರೂರಿನಲ್ಲಿ ಓದಿರುತ್ತೇನೆ. ನಾನು ಪಿ.ಯು.ಸಿ ಮುಗಿಸಿ ಸುಮಾರು 15 ವರ್ಷ ಆಗಿರಬಹುದು. ನಾನು ಈಗ ಕೆಲಸಕ್ಕೆ ಹೋಗಲು ಪ್ರಾರಂಭಿಸಿ 9 ವರ್ಷ ಆಗಿರುತ್ತದೆ. ನಾನು ಕೆ ಎಸ್ ಆರ್ ಟಿ ಸಿ ಡಿಪೋ ಹೊನ್ನಾಳಿಯಲ್ಲಿ ಚಾಲಕ ಅಂತಾ ಕೆಲಸ ಮಾಡುತ್ತಿದ್ದೇನೆ. ನನಗೆ ಪಾಳೆ ಆಧಾರದಲ್ಲಿ ಕೆಲಸ ಇರುತ್ತದೆ. ನನ್ನ ಮನೆ ಶಿರಗಂಬಿಯಲ್ಲಿ ಇದ್ದು ಕೆಲಸಕ್ಕೆ ಹೋಗಿ ಬಂದು ಮಾಡುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಂಪೂರ್ಣವಾಗಿ ಓದಿ ತಿಳಿದು ದಾಖಲಿಸಿರುತ್ತೇನೆ.

2.ದಿಃ 28.06.2025 ರಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಅಂದರೆ ಸಾಕ್ಷಿ ದಿನಾಂಕ ನೆನಪಿಲ್ಲ. ನಾಲ್ಕು ವರ್ಷಗಳ ಹಿಂದೆ ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ವ್ಯವಸಾಯ ಅಂತಾ ಬರೆಸಿರುವುದು ತಪ್ಪು ಇರುತ್ತದೆ.

3.ಸದರಿ ದಾವೆ ಬರೆಯರು ಮಾಹಿತಿಯನ್ನು 1 ನೇ ವಾದಿ ಹಾಗೂ ನಾನು ನೀಡಿರುತ್ತೇವೆ. ನನ್ನ ದಾವೆ ಅಸಲರ್ಜಿಯಲ್ಲಿ ನನ್ನ ಉದ್ಯೋಗ ಕೇವಲ ವ್ಯವಸಾಯ ಅಂತಾ ತೋರಿಸಿದೆ ಅಂದರೆ ಸರಿ. ದುರುದ್ದೇಶದಿಂದ ಆ ರೀತಿ ನನ್ನ ಅಸಲರ್ಜಿಯಲ್ಲಿ ಬರೆಸಿರುತ್ತೇನೆ ಅಂದರೆ ಸುಳ್ಳು.

4.ನನ್ನ ಅಸಲರ್ಜಿಯ 7 ನೇ ಪುಟದಲ್ಲಿ 5 ನೇ ಖಂಡಿಕೆಯ 3 ನೇ ಸಾಲಿನಲ್ಲಿ ಆಸ್ತಿಯು ಕಿರ್ಲೋಸ್ಕರ ಕಂಪನಿಗೆ ಕೊಟ್ಟಿದ್ದು ಇದೆ ಅಂತಾ ಬರೆದಿದೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ಕಿರ್ಲೋಸ್ಕರ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

5. ನಿಪಿ-1 ರಿಂದ 4 ರ ಪಹಣಿ ಪತ್ರಿಕೆಗಳಲ್ಲಿ ಮಾಲೀಕರು ಹಾಗೂ ಕಬ್ಜಾದಾರರು ಅಂತಾ 29 ನೇ ಪ್ರತಿವಾದಿಯ ಹೆಸರು ಇರುತ್ತದೆ ಅಂದರೆ ಸರಿ. ನಿಪಿ-7 ರಲ್ಲಿ ಸಹ 32 ಗುಂಟೆಗೆ 29 ನೇ ಪ್ರತಿವಾದಿಯ ಹೆಸರು ಇರುತ್ತದೆ ಅಂದರೆ ಸರಿ. ನಿಪಿ-8 ರಲ್ಲಿ ಕೂಡಾ 2 ಎಕರೆ 26 ಗುಂಟೆಗೆ 29 ನೇ ಪ್ರತಿವಾದಿಯ ಹೆಸರು ಇದೆ ಅಂದರೆ ಸರಿ. ನಿಪಿ- 10

ರಲ್ಲಿಯೂ ಸಹ 3 ಎಕರೆ 10 ಗುಂಟೆ ಜಮೀನಿಗೆ KIADB ಇವರ ಹೆಸರು ಇದೆ ಅಂದರೆ ಸರಿ. ಅದೇ ರೀತಿ ನಿಪಿ-12 ರಲ್ಲಿ ಕಾಂಪಿಟೆಂಟ್ ಅಥಾರಿಟಿ ಫಾರ್ ಲ್ಯಾಂಡ್ ಅಕ್ವೇಶನ್ ಹರಿಹರ - ಬೆಳಗಾಂ ಬೈಫಾಸ್ ಸೆಕ್ಸನ್ NH4 ಧಾರವಾಡ ಇವರ ಹೆಸರಿಗೆ 24 ಗುಂಟೆ 7 ಆಣೆ ಹಾಗೂ ನ್ಯಾಷನಲ್ ಹೈವೆ ಆಥಾರಿಟಿ ಆಫ್ ಇಂಡಿಯಾ ಇವರ ಹೆಸರಿಗೆ 4 ಎಕರೆ 15 ಗುಂಟೆ 8 ಆಣೆ ಮತ್ತು ಭೂ ಸ್ವಾದೀನ ಸಕ್ಷಾಮಾಧಿಕಾರಿ NHAI ವಿದ್ಯಾಗಿರಿ ಧಾರವಾಡ ಇವರ ಹೆಸರಿಗೆ 9 ಗುಂಟೆ 1 ಆಣೆ ಹಾಗೂ ಕರ್ನಾಟಕ ನೀರಾವರಿ ನಿಗಮ ಇವರ ಹೆಸರಿಗೆ 06 ಗುಂಟೆ ಜಮೀನು ತೋರಿಸಲಾಗಿದೆ ಎಂದರೆ ಸರಿ. ನನ್ನ ದಾವೆಯಲ್ಲಿ ನಿಪಿ- 10, 12 ರಲ್ಲಿ ತೋರಿಸಿದ ಮಾಲೀಕರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಇದೇ ತರಹ ನಿಪಿ-13 ರಲ್ಲಿ ಸಕ್ಷಮ ಪ್ರಾಧಿಕಾರ ಬಿನ್ NHAI ಪಿಐಯು ಧಾರವಾಡ ಇವರ ಹೆಸರಿಗೆ 12 ಗುಂಟೆ, ಭೂಸ್ವಾದೀನ ಸಕ್ಷಮ ಅಧಿಕಾರಿ NHAI ವಿದ್ಯಾಗಿರಿ ಧಾರವಾಡ ಇವರ ಹೆಸರಿಗೆ 4 ಗುಂಟೆ 6 ಆಣೆ ಮೂರು ಭಾರಿ ತೋರಿಸಿದ್ದು ಇದೆ ಅಂದರೆ ಸರಿ. ಇವರನ್ನು ಸಹ ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ನಿಪಿ-14 ರಿಂದ 16 ರ ಪಹಣಿ ಪತ್ರಿಕೆಯಲ್ಲಿ ಭೂಸ್ವಾದೀನ ಸಕ್ಷಮಅಧಿಕಾರಿ NHAI ವಿದ್ಯಾಗಿರಿ ಧಾರವಾಡ ಇವರ ಹೆಸರು ಕಂಡುಬರುತ್ತಿದೆ ಅಂದರೆ ಸರಿ.

6. ಕಂದಾಯ ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಆಸ್ತಿ ಜಮೀನುಗಳನ್ನು ಹಳೇಯ MIADB ಅಥವಾ ಈಗಿನ KIADB ನವರು ಭೂ ಸ್ವಾದೀನ ಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿರುತ್ತದೆ. ಹೀಗಾಗಿ 29 ನೇ ಪ್ರತಿವಾದಿಯು ಹಳೇಯ MIADB ಹಾಗೂ ಈಗಿನ KIADB ಇವರಿಂದ ದಾವೆಯ ಯಾವ ಯಾವ ಜಮೀನುಗಳನ್ನು ಖರಿದಿ ಪಡೆದು ಸ್ವಾಧೀನ ದಲ್ಲಿ ಇರುತ್ತಾರೆ ಅಂತಾ ನಾನು ನೋಡಿರುತ್ತೇನೆ. ಸುಮಾರು 50 ವರ್ಷಗಳಿಂದ 29 ನೇ ಪ್ರತಿವಾದಿ ತಾನು ಖರೀದಿಸಿದ ಜಮೀನುಗಳ ಕಬ್ಜಾ ವಹಿವಾಟಿಯಲ್ಲಿದ್ದ ಬಗ್ಗೆ ದಾಖಲೆಗಳ ಮೂಲಕ ಗೊತ್ತಾಗಿರುತ್ತದೆ.

ಮುಂದುವೆರದ ಪಾಟೀ ಸವಾಲಿಗೆ 29 ನೇ ಪ್ರತಿವಾದಿ ಪರ ವಕೀಲರಾದ ಶ್ರೀ .ಪಿ ಆರ್ ಹೆಚ್ ವಕೀಲರು ಸಮಯವಕಾಶ ಕೋರಿದ್ದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.